Doc-174
1-P-4

13 ನೇ ಕನ್ನಡ ರಾಜ್ಯೋತ್ಸವ ವಿಶೇಷ ಸಂಚಿಕೆ

Regd No BG 155 1-11-1969

SATYAVADI Daily, MYSORE 4 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರನುನೆ ಸಿರಸ್ತೇದಾರ್ ಎಂ. ಸ್ ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ದಸರಾ ವಸ್ತುಪ್ರದರ್ಶನದಲ್ಲಿ
ವಿಶೇಷ ಮನರಂಜನೆ ಕಾರ್ಯಕ್ರಮಗಳು
ತಾ|| 1-11-1969 ಶನಿವಾರ
ಸಂಜೆ : 7 ಘಂಟೆಗೆ
ಮೈಸೂರಿನ ಶ್ರೀ ಚಾಮುಂಡೇಶ್ವರಿ ಕರ್ನಾಟಕ ಸಭಾ ಆವರಿಂದ
ಸುಭದ್ರಾ ಕಲ್ಯಾಣ
ನಾಟಕ
ತಾ. 2-11-1969 ಭಾನುವಾರ
ಸಂಜೆ : 7 ಘಂಟೆಗೆ
ಮದ್ರಾಸಿನ ಸಿನಿಮಾ ನಟ ಶ್ರೀ ಉದಯ ಕುಮಾರ್
ಮತ್ತು ಪಾರ್ಟಿಯವರಿಂದ
ಮದುವೆ ಮ್ಯಾರ್ಕೆಟ್
ನಾಟಕ
ಪ್ರವೇಶ ದರ 50. ಪೈಸೆ.

ವಶಪಡಿಸಿಕೊಂಡ ಭೂಮಿಗೆ ಪರಿಹಾರ

ಮಂಗಳೂರು — ರೇವು, ರೈಲು, ಕೈಗಾರಿಕೆಗಳಿಗಾಗಿ ವಶಪಡಿಸಿಕೊಳ್ಳಬೇಕಾಗಿರುವ 5900 ಎಕ್ರೆ ಭೂಮಿಯಲ್ಲಿ 5200 ಎಕ್ರೆ ವಶಪಡಿಸಿಕೊಂಡು, ಪರಿಹಾರವಾಗಿ ರೂ 3 ಕ್ಕೆ ಪರಿಹಾರ ನೀಡಲಾಗಿದೆಯೆಂದು ಪ್ರಕಟವಾಗಿದೆ.

○

ಸರಣಿ ಕಳ್ಳತನ

ಕಾರವಾರ— ಹೊನ್ನಾವರದಲ್ಲಿ ಪೌರ ಸಭೆ ಚಿಕ್ಕಾಯ್ ಹೆಚ್ಚಿಸಿ, ವರ್ತಕರೂ, ಚಿಲ್ಲರೆ ವ್ಯಾಪಾರಿಗಳೂ ಬೀದಿಯಲ್ಲಿ ಮಾರುವವರೂ ಲೈಸೆನ್ಸು ತೆಗೆದುಕೊಳ್ಳುವದನ್ನು ಖಡ್ಡಾಯ ಮಾಡಿರುವದನ್ನು ಪ್ರತಿಭಟಿಸಿ. ಒಧ್ದನಾರ ಹರತಾಳ ಆಚರಿಸಲಾಯಿತು

ಕನ್ನಡ ರಾಜ್ಯೋತ್ಸವ

ಮೈಸೂರು— ಮೇಳ್ಕಂಡ ಸನಾರಂಭವು ಇಂದು ಪುರಭವನದಲ್ಲಿ ಏರ್ಪಡಿಸಲಾಗಿದೆ.

★

ಸೈಕಲ್ ಬ್ಯಾಕ್ಸ್

ಮೈಸೂರು— ಸೈಕಲ್ ಬಿಲ್ಲೆ ಪಡೆಯಬೇಕೆಂಬ ಕಮಿಷನರರ ಪ್ರಕಟಣೆಯನ್ನು ಪೌರಸಭೆಯಲ್ಲಿ ಕಟ್ಟುವಾಗಿ ಟೀಕಿಸಲಾಯಿತು — ಪೌರರು ತೆಗೆದುಕೊಳ್ಳಬಾರದೆಂದು ಕೆಲ ನುಂದಿ ವಿನಂತಿಸಿದರು — ಕಮಿಷನರವರು ಈ ತೆರಿಗೆ ವಸ್ಕೂಲ್ಮಾಡದಂತೆ ಸಭೆ ತಿಳಿಸಬೇಕೆಂದು ಹೇಳಿದರು — ಸ್ರಕಟಣೆಯನ್ನು ವಿರೋಧಿಸಿ ಅಧ್ಯಕ್ಷರು ಮರವಣಿಗೆ ನಡೆಸಬೇಕೆಂದು ಒಬ್ಬರು ಹೇಳಿದರು

ಕನ್ನಡ ರಾಜ್ಯೋತ್ಸವ ಶುಭಾಶಯಗಳು

—

ಇಂದು 13ನೇ ಕನ್ನಡ ರಾಜ್ಯೋತ್ಸವ. ಪ್ರಾಚೀನ ಹಾಗೂ ಆಧುನಿಕ ಕವಿಗಳ ಕನಸಾಗಿದ್ದ ಕನ್ನಡ ರಾಜ್ಯ 1956 ನೇ ನವೆಂಬರ್ 1 ರಂದು ಫಲಿಸಿತು. ಕನ್ನಡ ರಾಜ್ಯೋತ್ಸವ ಎಂದರೆ ಕನ್ನಡಿಗರು ತುಂಬ ಆನಂದ ಮತ್ತು ಹೆಮ್ಮೆ ಪಡಬೇಕು.

ಕನ್ನಡ ರಾಜ್ಯೋತ್ಸವ ಕನ್ನಡಿಗರಿಗೆ ಹರ್ಷ ಉಂಟುಮಾಡುವದಾದರೂ ಇನ್ನೂ ಪೂರ್ಣವಾಗಿ ಕನ್ನಡ ಭಾಗಗಳು ಕನ್ನಡ ರಾಜ್ಯಕ್ಕೆ ಸೇರಿಲ್ಲ.

ತಾಳವಾಡಿ ಫಿರ್ಕಾ ಇನ್ನೂ ಕನ್ನಡ ರಾಜ್ಯದೊಡನೆ ವಿಲೀನವಾಗಿಲ್ಲ : ಕಾಸರಗೋಡು ಇನ್ನೂ ಸೇರಿಲ್ಲ : ಮಹಾಜನ ಆಯೋಗದ ವರದಿ ಇನ್ನೂ ಜಾರಿಗೆ ಬಂದಿಲ್ಲ : ಇವೆಲ್ಲಾ ಕನ್ನಡಿಗರಿಗೆ ಮನಸೋಯುನಂತಹುವು.

ಕನ್ನಡ ರಾಜ್ಯೋತ್ಸವದ ಕನ್ನಡಿಗರು ಪ್ರತಿಜ್ಞೆ ಸ್ವೀಕರಿಸಬೇಕು. ಅಖಂಡ ಭಾರತದ ಐಕ್ಯತೆಯ ಸಾಧನೆಯ ಗುಳಿ ಹೊಂದಿ, ಭಾರತದ ಅಂಗರಾಜ್ಯ ಕನ್ನಡ ರಾಜ್ಯದ ಸಂಘಟನೆಗೆ ದುಡಿಯಬೇಕು. ಕನ್ನಡ ರಾಜ್ಯದ ಎಲ್ಲೆಯೊಳಗಿನ ಕನ್ನಡಿಗರ ಭಾವೈಕ್ಯತೆಗೆ ಪೂರ್ಣ ಶ್ರಮಿಸಬೇಕು.

ಶ್ರೀ ವೀರೇಂದ ಪಾಟೀಲರ ನೇತೃತ್ವದ ಸರ್ಕಾರಿ ಕರ್ನಾಟಕದ ಸರ್ವಭಾಗಗಳ ಸರ್ವೋನ್ನತಿಗೆ ದುಡಿದು ಕೀರ್ತಿಗಳಸಲಿ.

ಕನ್ನಡ ರಾಜ್ಯೋತ್ಸವದ ಈ ಸುದಿನದಂದು " ಸತ್ಯವಾದಿ " ಯು ಸರ್ವರಿಗೂ ಶುಭಾಶಯ ಕೋರುತ್ತದೆ.

○

ಪಾಟೀಲರ ಸಂದೇಶ

ರಾಜ್ಯೋತ್ಸವ ದಿನದ ಸಂದೇಶದಲ್ಲಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಜನತೆಗೆ ಶುಭಾಶಯ ನೀಡಿ, ಮೂರು ಕೋಟಿ ಕನ್ನಡ ಜನತೆಯ ಶಾಂತಿ ಮತ್ತು ಅಭ್ಯುದಯಕ್ಕೆ ಪ್ರತಿಯೊಬ್ಬ ಕನ್ನಡಿಗನೂ ತನ್ನ ಕರ್ತವ್ಯವನ್ನು ಮುಡುಪಿಡುವುದು ಅಗತ್ಯವೆಂದು ತಿಳಿಸಿರುವರು.

★

ಧರ್ಮವೀರರ ಸಂದೇಶ

ನವ ಮೈಸೂರಿನ ಜನ್ಮ ವಾರ್ಷಿಕೋತ್ಸವವಾದ ರಾಜ್ಯೋತ್ಸವ ಮೈಸೂರು ಜನತೆಗೆ ಆನಂದ ಹಾಗೂ ದೊಡ್ಡ ದಿನ ಎಂದು ರಾಜ್ಯಪಾಲ ಶ್ರೀ ಧರ್ಮವೀರರು ತಿಳಿಸಿ, ರಾಜ್ಯ ವಾರ್ತಾ ಇಲಾಖೆಯು ಈ ಸಂದರ್ಭದಲ್ಲಿ ವಿಶೇಷ ಪುರವಣಿ ಪ್ರಕಟಿಸುವ ಬಗ್ಗೆ ಹರ್ಷ ಸೂಚಿಸಿದ್ದಾರೆ.

★

ಮೂರ್ತಿಯವರ ಸಂದೇಶ

ರಾಜ್ಯದ ವಾರ್ತಾ ಮಂತ್ರಿ ಶ್ರಿ ರಾಜಶೇಖರ ಮೂರ್ತಿಯವರು ರಾಜ್ಯೋತ್ಸವ ಸಂದೇಶವನ್ನಿತ್ತು, ಯಾವತ್ತಿಗಿಂತಲೂ ರಾಜ್ಯವನ್ನು ಹಿರಿದಾಗಿ ಮಾಡುವ ಕಾರ್ಯದಲ್ಲಿ ನಿರತರಾಗೋಣ ಎಂದು ಕರೆ ನೀಡಿರುವರು.

★

ಫ್ರೆಂಚ್ ಮಹಿಳೆಯ ದಾನ

ತಿರುಪತಿ— ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯಕ್ಕೆ ಒಬ್ಬ ಫ್ರೆಂಚ್ ಮಹಿಳೆ 200 ಡಾಲರುಗಳನ್ನು ಉದಾರ ದಾನಾ ಮಾಡಿದ್ದರು : ಅದರಲ್ಲಿ ಗಾಂಧೀಜೀ ಸ್ಟ್ಯಾಚು ನಿರ್ಮಿಸಿ ಈ ವಿಷಯವನ್ನು ಆಕೆಗೆ ತಿಳಿಸಲಾಯಿತು.

ಚಂದ್ರಗ್ರಹದ ಕಲ್ಲು

ಚಂದ್ರಗ್ರಹದ ಕಲ್ಲು 1500 ಡಿಗ್ರಿ ಸಾಖದಲ್ಲಿ ಕರಗುತ್ತದೆ ಎಂದು ಜರ್ಮನ್ ವಿಜ್ಞಾನಿಗಳು ನಡೆಸಿದ ಸಂಶೋಧನೆಯಿಂದ ಪತ್ತೆ ಹೊರಪಟ್ಟಿದೆ

★

ಇಬ್ಬರ ಸ್ಥಾನ ಹೋಯಿತು

ನವದೆಹಲಿ— ಪ್ರಧಾನಿಯರ ಬೆಂಬಲಿಗರಾದ ಶ್ರೀ ಫಕ್ರುದ್ದೀನ್ ಅಲ್ಲಿ ಅಹಮದ್ ಮತ್ತು ಶ್ರೀ ಸುಬ್ರಹ್ಮಣ್ಯಂರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ತೆಗೆದು ಹಾಕಲಾಗಿದೆ

★

ಬಹಿಷ್ಕಾರವೇ

ನವದೆಹಲಿ— ಇಂದು ಕಾಂಗ್ರೆಸ್ ಅಧ್ಯಕ್ಷರು ಕರೆದಿರುವ ಕಾರ್ಯಕಾರಿ ಸಮಿತಿ ವಿಷಯವನ್ನು ಪ್ರಧಾನಿ ಮತ್ತು ಅವರ ಬೆಂಬಲಿಗರು ಬಹಿಷ್ಕರಿಸುವರೆಂದು ಹೇಳಲಾಗಿದೆ.

★

ಭಾರತ ಸುಮ್ಮನಿದ್ದೀತೆ

ಜಮ್ಮು— ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಮುಸ್ಲಿಂ ಸಮ್ಮೇಳನವು, ಕಾಶ್ಮೀರವನ್ನು ಭಾರತದಿಂದ ಪಡೆಯಲು ಮುಜಿಹಿದ್ ಸೇನೆ ಸ್ಥಾಪಿಸಲಿದೆ ಎಂದು ಡಾಕ್ ಪ್ರಕಟಿಸಿದೆ.

ನಾಣ್ಯ ನೋಟು ಹಾರ

ಕಲ್ಲೀಕೋಟೆ— ಮುಖ್ಯಮಂತ್ರಿ ಪದ ಏತ್ಯಜಿಸಿದ ಶ್ರೀ ನಂಬೂದರಿಪಾದುಪಾದರಿಗೆ ಮನ್ನಚೀರಾ ಮೈದಾನದಲ್ಲಿ ಮಾರಕ್ಸಿಸ್ಟರೂ ಅವರ ಸಹಾನುಭೂತಿಯವರೂ ಅದ್ದೂರಿ ಸ್ವಾಗತ ನೀಡಲಾಯಿತು – ವ್ಯಕ್ತಿ ಮತ್ತು ಸಂಸ್ಥೆಗಳ ಪರ 500 ಹಾರಗಳು ಅರ್ಪಿಸಲಾಯಿತು – ಅನೇಕ ಹಾರಗಳಲ್ಲಿ ನಾಣ್ಯ ಮತ್ತು ನೋಟುಗಳಿದ್ದವು.

★

ರಾಜ್ಯೋತ್ಸವ

ಬೆಳಗಾಂ— ಮೈಸೂರು ರಾಜ್ಯದ 13 ನೇ ರಾಜ್ಯೋತ್ಸವವನ್ನು ಇಂದು ವೈಭವವಾಗಿ ನೆರವೇರಿಸಲು ಜಿಲ್ಲಾಧಿಕಾರಿಗಳು ಪ್ರಕಟಿಸಿದ್ದಾರೆ : ಭಾರೀ ಮೆರವಣಿಗೆ ಮತ್ತು ಸಾಮೂಹಿಕ ಬಹಿರಂಗ ಸಭೆ ಏರ್ಪಾಟಿದೆ – ಬೆಳಗಾಂ ಮತ್ತು ಸುತ್ತ ಮುತ್ತ ಇರುವ ನುರಿತ ಮಾತನಾಡುವವರು ಈ ದಿನವನ್ನು ಕರಾಳ ದಿನವಾಗಿ ಆಚರಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ ಕರೆಯಿತ್ತಿದೆ – ಏನಾದರೂ ಗಲಾಟೆಯಾದೀತೆಂದು ಮುನ್ನೆಚ್ಚರಿಕೆ ಕಾರ್ಯ ಕೈಗೊಳ್ಳಲಾಗಿದೆ – ಪ್ರತಿ 200 ಅಡಿಗಳಲ್ಲಿ ಪೋಲೀಸು ಸಹಾಯ ದೊರೆಯುವ ಏರ್ಪಾಟಿದೆ

○ ಬೆಂಗಳೂರು— ವ್ಯವಸಾಯ ಸಾಲಗಾರರ ಪರಿಹಾರ ಶಾಸನವನ್ನು ಹೈಕೋರ್ಟು ಹೊಡೆದುಹಾಕಿತು – ಇದರ ವಿರುದ್ಧ 1275 ರಿಟ್ ಅರ್ಜಿಗಳು ಹಾಕಲ್ಪಟ್ಟಿದ್ದವು – ತೀರ್ಪು 112 ಪುಟಗಳಿವೆ.

★★★

ನಮ್ಮ ಜೀವಿತ

ನಮ್ಮ ಜೀವಿತದ ಸಾಧಾರಣ 613200 ಗಂಟೆಗಳನ್ನು ನಾವು ಉಪಯೋಗಿಸುತ್ತಿರುವ ರೀತಿ ನೋಡಿ. ಸುಮಾರು 70 ವರ್ಷದ ಆಯುಸ್ಸಿನಲ್ಲಿ, 65 ವರ್ಷ ಕಾಲದಲ್ಲಿ ಊಟ ತಿಂಡಿ ಸೇವಿಸುವದರಲ್ಲಿ ಕಳೆಯುವೆವು : ಈ ಕಾಲದಲ್ಲಿ 20 ಟ್ರಕ್ ಲೋಡ್, 18 ಟ್ರಕ್ ಆಲೂಗೆಡ್ಡೆ, 12 ಟ್ರಕ್ ಹಣ್ಣು, 12 ಟ್ರಕ್ ತರಕಾರಿ, 5 ಟ್ರಕ್ ಮಾಂಸ, 1 ವರೆ ಟ್ರಕ್ ಮೀನು, 30000 ಕೋಳಿಮೊಟ್ಟೆಯನ್ನು ಒಬ್ಬ ಸೇವಿಸುತ್ತಾನೆ ; ಚಹೇಕರು ಕಾಲು ಟ್ರಕ್ ಹೊಗೇಸ್ಸು ಧೂಮಪಾನಕ್ಕೆ ಉಪಯೋಗಿಸುತ್ತಾರೆ; 40–50 ಸಾವಿರ ಗ್ಯಾಲ್ ವಿವಿಧ ಪಾನೀಯ ಸೇವಿಸುತ್ತಾರೆ.

ಸುಮಾರು 5 ವರ್ಷ ಸ್ನಾನದಲ್ಲಿ ಕಳೆಯಮಾಗುವುದು ; ಇದು ವಿಶ್ವಾಸಕ್ಕೆತ್ತುವುದಕ್ಕಲ್ಲವಾದರೂ, ತಾನು ಕೆಲಸಕ್ಕೆ ಹೋಗಿಬರುವ, ಮಹಡಿ ಹತ್ತಿ ಇಳಿಯುವ, ಅಂಗಡಿಯಲ್ಲಿನ ವ್ಯಾವಾರ, ಕೊಠಡಿಯಿಂದ ಕೊಠಡಿಗೆ ಹೋಗಿಬರುವುದು, ತೋಟ ಸುತ್ತಾಡುವುದು ಇತ್ಯಾದಿಗಾಗುತ್ತದೆ. 4 ವರ್ಷ ಮಾತಾಡುವುದು, ಹರಟೆಹೊಡೆಯುವದರಲ್ಲಿ ಕಳೆಯಲಾಗುತ್ತೆ. ಮಕ್ಕಳ ಆಟದಿಂದ ಹಿಡಿದು, ಮುದಿತನದಲ್ಲಿ ರೇಡಿಯೋ ಕೇಳುವ, ಮತ್ತು ವಿವಿಧ ವಿನೋದಗಳಿಗೆ 8 ವರ್ಷ ವ್ಯಯವಾಗುತ್ತದೆ. ಉಡುಪು ಧರಿಸುವುದು. ಕ್ಷೌರ, ಬಟ್ಟೆ ಒಗಿಯುವುದು, ಸ್ನಾನಮಾಡುವುದು ಮುಂತಾದಕ್ಕೆ 5 ವರ್ಷ ಕಳೆಯುತ್ತದೆ. ಫೋನಿನಲ್ಲಿ ಮಾತುಕತೆ ನಡೆಸುವದರಲ್ಲಿ ಅನೇಕರು 1 ವರ್ಷ ಕಳೆಯುತ್ತಾರೆ ಖಾಯಿಲೆ ಕಸಾಲೆ ಮುಂತಾದ್ದರಲ್ಲಿ 3 ವರ್ಷ ಹೋಗುತ್ತದೆ. ಡಾಕ್ಟರನ್ನು ನೋಡುವುದು ಅಥವಾ ಕರೆಸುವದು 6 ತಿಂಗಳು ಹಿಡಿಯುತ್ತೆ. ನಮ್ಮನ್ನು ಕನ್ನಡಿಯಲ್ಲಿ ನೋಡಿಕೊಳ್ಳುವುದು 100 ದಿನಗಳು. ನಿದ್ದೆಗೆ ಜೀವಿತದ ಮೂರನೇ ಒಂದು ಭಾಗ ಸುಮಾರು 25 ವರ್ಷ. ಪದಾರ್ಥಗಳಿಗೆ, ಜನರಿಗೆ ಕಾಯುವ ಹೊತ್ತು 3 ವರ್ಷ.

ರಾಧಾಕೃಷ್ಣ

ಶ್ರೀ ರಾಧಾಕೃಷ್ಣ ದೇವರ ವೈಷ್ಣವ ಭಕ್ತ ಒಬ್ಬ ಗುರುವಿನ ಮುಂದೆ ಮೊಳಕಾಲೂರಿ ಪ್ರಾರ್ಥನೆ ನಡೆಸುತ್ತಿದ್ದ ಇಂಗ್ಲೆಂಡು ಭಕ್ತರ ಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು. ದೀಕ್ಷೆ ಹೊಂದದಿದ್ದರೂ ಬೀಟಲ್ ಹ್ಯಾರಿಸ್ ಈ ಪಂಥವನ್ನು ಅನುಸರಿಸುತ್ತಿರುವದಾಗಿ ವರದಿಯಾಗಿದೆ. ಇಂಡಿಯಾದಲ್ಲಿ ಅಮೇರಿಕನ್ನರು ತಲೆ ಬೋಳಿಸಿಕೊಂಡು ಜಪಮಾಲೆ ಹಿಡಿದು ಜಪಮಾಡುತ್ತಾ ವೈಷ್ಣವ ಪಂಥ ಅನುಸರಿಸುವದನ್ನು ಕಂಡಿದ್ದೇನೆ. ಅಮೇರಿಕಾದಲ್ಲಿ ಅನೇಕ ವೈಷ್ಣವ ಮಠಗಳಿವೆ, ರಥ ಜಾತ್ರೆ ಉತ್ಸವಗಳು ನಡೆಯುತ್ತದೆ.

§ ಅಯ್ಯೋ ! ಇಲ್ಲಿ ವಿಚಾರ ಬೇರೆಯಾಗಿದೆ. ಇಕ್ಕ್ವಿಲಾಬ್ ಕೇಳಬರುವಷ್ಟು ರಾಧಾಕೃಷ್ಣನ ಹೆಸರು ಗಳಿಬರುತ್ತಿಲ್ಲ. ಇದೊಂದು ವಿಚಿತ್ರ ಪ್ರಪಂಚವೇ ಸರಿ. (ಟ್ರೂತ್)

ವಾರ್ತಾವಿಶೇಷಗಳು

ಶಿಲಾಂಗ್— ಚೀನಾದಲ್ಲಿ ತರಬೇತಾದ 76 ಬೌದ್ಧ ನಾಗಗಳನ್ನು ಮಣಿಪುರ–ಬರ್ಮಾ ಗಡಿಯಲ್ಲಿ ರಕ್ಷಣಾ ಪಡೆಬಂದಿಸಿದೆ.

ರಾಜಘಿರ್ (ಬೀಹಾರ್)— ಭಾರತದ ಎಲ್ಲಾ ಗ್ರಾಮಗಳನ್ನೂ 1972 ರೊಳಗೆ ಗ್ರಾಮದಾನವಾಗಿ ಘೋಷಿಸಲ್ಪಡಲು ಅಖಿಲ ಭಾರತ ಸರ್ವೋದಯ ಸಮ್ಮೇಳನ ನಿರ್ಧರಿಸಿದೆ

ಬೆಂಗಳೂರು— ಭಾರತ ಸರಕಾರವು ಮೈಸೂರು ರಾಜ್ಯದಲ್ಲಿ ಮತ್ತೂ ಎಂಟು ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಲೈಸನ್ಸು ಕೊಟ್ಟಿದೆ – ಇನ್ನೂ ಆರಕ್ಕೆ ಪ್ಲಾನಿಂಗು ಕಮಿಷ್ನ ಪರಿಶೀಲನೆಯ ವಿವಿಧ ಹಂತದಲ್ಲಿದೆ.

ನವದೆಹಲಿ— ಇನ್ನು ಮುಂದೆ ಟೆಲಿಫೋನ್ ಬೇಕೆನ್ನುವವರು ರೂ. 10 ಫೀಜು ಕೊಡಬೇಕೆಂದು ಸರ್ಕಾರ ನಿರ್ಧರಿಸಲಿದೆ.

ವುಡ್‌ಲಾಂಡ್ ಜಯಪ್ರದ 4 ನೇ ವಾರ

ಶಿನಿ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶೀಕಪೂರ್ ಬಬೀತಾ ಜಾನೀವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ

.... ಅತ್ಯಮೋಘ ತಮಿಳು ಚಿತ್ರ ....

ತುಣ್ಬೆವನ್

ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್

ನಿರ್ದೇಶನ : ಎಂ ಎಂ ತಿರುಮಂಗಂ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮಹತ್ಕಾರ್ಯಗಳು ಹೆಚ್ಚಿ ಜಾಸ್ತಿಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4

ಅಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ

ಜಗದ್ವಿಖ್ಯಾತಿಯನ್ನು ಪಡೆದಿದೆ

★

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ
ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದಎಣ್ಣೆ ಕಾರ್ಖಾನೆ
ಮೈಸೂರು ಮತ್ತು ಶಿವಮೊಗ್ಗ

ಸೌಂದರ್ಯ ರಕ್ಷಣೆಯಲ್ಲಿ

ಮೈಸೂರು ಶ್ರೀಗಂಧದ ಸಾಬೂನಿನಿಂತ ಮಿಗಿಲಾದ ಸಾಬೂನು ಮತ್ತೊಂದು ಇಲ್ಲ.

ಈ ಅತ್ಯುತ್ತಮ ಸ್ನಾನದ ಸಾಬೂನಿನಲ್ಲಿರುವ ಶ್ರೀಗಂಧದ ಎಣ್ಣೆಯು ಚರ್ಮದ
ರಕ್ಷಣೆ ಮಾಡುವುದಲ್ಲದೆ ಅದಕ್ಕೆ ಯೌವನದ ಮೆರಗಳನ್ನು ನೀಡುತ್ತದೆ.

ಆಯ್ಕೆಯಲ್ಲಿ ಇದಕ್ಕಿಂತ ಮಿಗಿಲಾದ ಸಾಬೂನು ಇನ್ನೊಂದಿಲ್ಲ

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ,
ಬೆಂಗಳೂರು-12